# ಸಿಹಿ ಇಲ್ಲದ ಸುದ್ದಿ

ಮಧುಮೇಹ ಎಂಬುದು ಈಗ ಆಯಾಯ ವ್ಯಕ್ತಿಗಳಿಗೆ ಸಂಬಂಧಿಸಿದ ಕಾಯಿಲೆಯ ಸಮಸ್ಯೆಯಾಗಿಯಷ್ಟೇ ಉಳಿದಿಲ್ಲ. ಬದಲಿಗೆ, ಅದು ಈಗ ತ್ವರಿತ ಗತಿಯಲ್ಲಿ ಬೆಳೆಯುತ್ತಿರುವಂತಹ ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿದೆ.



ಬೆಂಗಳೂರು ನಗರದ ಸುಮಾರು ಶೇಕಡಾ 14ರಷ್ಟು ಮಂದಿ ಮಧುಮೇಹ (ಸಕ್ಕರೆ ಕಾಯಿಲೆ)ದಿಂದ ಬಳಲುತ್ತಿದ್ದಾರೆ. ಜೊತೆಗೆ ಇಲ್ಲಿನ ಶೇಕಡಾ 3ರಷ್ಟು ಗರ್ಭಿಣಿಯರೂ ಮಧುಮೇಹ ಪೀಡಿತರು. ಈ ಸಿಹಿ ಇಲ್ಲದ ಸುದ್ದಿ ಕೇಂದ್ರ ಆರೋಗ್ಯ ಸಚಿವಾಲಯ ನಡೆಸಿರುವ ಇತ್ತೀಚಿನ ಅಧ್ಯಯನದಲ್ಲಿ ಬೆಳಕಿಗೆ ಬಂದಿದೆ.

ಭಾರತದಲ್ಲಿ ಸದ್ಯಕ್ಕೆ 5.1 ಕೋಟಿ ಮಧುಮೇಹ ರೋಗಿಗಳಿದ್ದಾರೆ. ಚೀನಾದ ನಂತರ ವಿಶ್ವದಲ್ಲೇ ಅತಿ ಹೆಚ್ಚು ಮಧುಮೇಹಿಗಳಿರುವ ರಾಷ್ಟ್ರ ನಮ್ಮದು. ಹೆಚ್ಚುತ್ತಿರುವ ಆಯುಷ್ಯ, ನಗರೀಕರಣ, ಬದಲಾಗುತ್ತಿರುವ ಜೀವನ ಶೈಲಿಗಳು ಮಧುಮೇಹಕ್ಕೆ ಕಾರಣವಾಗುತ್ತಿವೆ. 2030ರೊಳಗೆ ಭಾರತದಲ್ಲಿ ಮಧುಮೇಹಿಗಳ ಸಂಖ್ಯೆ 8 ಕೋಟಿಗೆ ತಲುಪಲಿದೆ ಎಂಬಂತಹ ಅಂದಾಜೂ ಇದೆ. ಈ ಹಿನ್ನೆಲೆಯಲ್ಲಿ, ಮಧುಮೇಹ ಎಂಬುದು ಈಗ ಆಯಾಯ ವ್ಯಕ್ತಿಗಳಿಗೆ ಸಂಬಂಧಿಸಿದ ಕಾಯಿಲೆಯ ಸಮಸ್ಯೆಯಾಗಿಯಷ್ಟೇ ಉಳಿದಿಲ್ಲ. ಬದಲಿಗೆ, ಅದು ಈಗ ತ್ವರಿತ ಗತಿಯಲ್ಲಿ ಬೆಳೆಯುತ್ತಿರುವಂತಹ ಸಾರ್ವಜನಿಕ ಆರೋಗ್ಯ ಸಮಸ್ಯೆಯಾಗಿದೆ ಎಂಬುದಂತೂ ಸ್ಪಷ್ಟ.

ಹಿಂದೆಲ್ಲಾ ಕಾಲರಾ, ಪ್ಲೇಗ್‌ನಂತಹ ಸಾಂಕ್ರಾಮಿಕ ಕಾಯಿಲೆಗಳು ಬಂದು ಜನರು ಸಾಯುತ್ತಿದ್ದರು. ಈಗ ಸಾಂಕ್ರಾಮಿಕ ರೋಗಗಳಿಗಿಂತ ಜೀವನಶೈಲಿ ಸಂಬಂಧಿತ ಕಾಯಿಲೆಗಳು ಹೆಚ್ಚಿನ ಭಾರತೀಯರನ್ನು ಸಾಯಿಸುತ್ತಿವೆ. ಕಳೆದ ದಶಕದಲ್ಲಿ ಭಾರತದಲ್ಲಿ ಕಾಯಿಲೆಗಳ ರೂಪುರೇಷೆಗಳಲ್ಲಿ ಪ್ರಮುಖ ಬದಲಾವಣೆಗಳಾಗಿವೆ ಎಂದು ವಿಶ್ವ ಆರೋಗ್ಯ ಸಂಘಟನೆ (ಡಬ್ಲ್ಯುಎಚ್‌ಓ )ಯೂ ಗುರುತಿಸಿದೆ. ಸದ್ಯಕ್ಕೆ ಭಾರತದಲ್ಲಿ ಸಂಭವಿಸುವ ಪ್ರತಿ 10 ಸಾವುಗಳಲ್ಲಿ 8 ಸಾವುಗಳು ಸಾಂಕ್ರಾಮಿಕವಲ್ಲದ ಕಾಯಿಲೆ (ನಾನ್ ಕಮ್ಯುನಿಕಬಲ್ ಡಿಸೀಸ್– ಎನ್‌ಸಿಡಿ)ಗಳಿಂದ ಉಂಟಾಗುತ್ತವೆ ಎಂಬಂತಹ ಡಬ್ಲ್ಯುಎಚ್‌ಓ ಅಂಕಿ ಅಂಶ ಚಿಂತೆಗೀಡು ಮಾಡುವಂತಹದ್ದು. ಈ ಪ್ರಕಾರ, ನಗರ ಪ್ರದೇಶಗಳಲ್ಲಿ ಮಧುಮೇಹ ಸೇರಿದಂತೆ ಹೃದಯ ರಕ್ತನಾಳ ಕಾಯಿಲೆಗಳು, ಕ್ಯಾನ್ಸರ್ ಹಾಗೂ ಉಸಿರಾಟದ ಕಾಯಿಲೆಗಳು ಸಾವಿಗೆ ಕಾರಣವಾಗುತ್ತಿವೆ. ಗ್ರಾಮೀಣ ಭಾರತದಲ್ಲೂ ಪ್ರತಿ 10 ಸಾವುಗಳ ಪೈಕಿ 6 ಸಾವುಗಳಿಗೆ ಸಾಂಕ್ರಾಮಿಕವಲ್ಲದ ಕಾಯಿಲೆಗಳೇ ಕಾರಣ.

ಭಾರತ ಅಷ್ಟೇ ಅಲ್ಲ, ಜಗತ್ತಿನಾದ್ಯಂತ ಈ ಬಗೆಯ ಆರೋಗ್ಯ ಸಮಸ್ಯೆ ಬೃಹತ್ತಾಗಿಯೇ ಬೆಳೆಯುತ್ತಿದೆ. ಜಾಗತಿಕವಾಗಿ ಶೇ 60ರಷ್ಟು ಸಾವುಗಳಿಗೆ ಈಗ ಸಾಂಕ್ರಾಮಿಕವಲ್ಲದ ರೋಗಗಳೇ ಕಾರಣ. ‘ಇವನ್ನು ನಿಯಂತ್ರಿಸುವ ಕ್ರಮ ಕೈಗೊಳ್ಳದಿದ್ದಲ್ಲಿ ಇವು ಸುನಾಮಿಯಾಗುತ್ತವೆ. ಜನರನ್ನಷ್ಟೇ ಇವು ಸಾಯಿಸುವುದಿಲ್ಲ. ಅಭಿವೃದ್ಧಿಗೆ ತಡೆಯಾಗಿ ಅರ್ಥ ವ್ಯವಸ್ಥೆ ಕುಸಿಯುವಂತೆ ಮಾಡುತ್ತವೆ’ ಎನ್ನುತ್ತಾರೆ ಡಬ್ಲ್ಯುಎಚ್‌ಓ ವಕ್ತಾರರು.

ಈ ಹಿನ್ನೆಲೆಯಲ್ಲಿ ಇವುಗಳ ನಿಯಂತ್ರಣಕ್ಕೆ ಸಮಗ್ರ ರಾಷ್ಟ್ರೀಯ ಕಾರ್ಯಕ್ರಮವೊಂದನ್ನು ಭಾರತ ರೂಪಿಸುತ್ತಿದೆ. ಮುಂದಿನ ವರ್ಷ (2012)ದಿಂದ ಶುರುವಾಗಲಿರುವ 12ನೇ ಪಂಚವಾರ್ಷಿಕ ಯೋಜನೆಯಲ್ಲಿ ಈ ಕಾರ್ಯಕ್ರಮವನ್ನು ಆರಂಭಿಸಲಾಗುವುದು ಎಂದು ಕೇಂದ್ರ ಆರೋಗ್ಯ ಸಚಿವ ಗುಲಾಂ ನಬಿ ಆಜಾದ್ ಹೇಳಿದ್ದಾರೆ. ಈ ಯೋಜನೆಯಲ್ಲಿ ರಾಷ್ಟ್ರದ ಎಲ್ಲಾ 604 ಜಿಲ್ಲೆಗಳನ್ನೂ ಸೇರಿಸಲಾಗುವುದು. ಆರೋಗ್ಯದ ಅರಿವು, ಅಪಾಯಗಳಿಗೆ ಒಡ್ಡಿಕೊಳ್ಳುವುದನ್ನು ತಡೆಯುವುದು, ಆರಂಭದಲ್ಲೇ ಸಮಸ್ಯೆ ಗುರುತಿಸುವುದು, ಸಾಮಾನ್ಯ ಕಾಯಿಲೆಗಳಿಗೆ ಚಿಕಿತ್ಸೆ ಹಾಗೂ ಪುನರ್ವಸತಿಯ ಸೇವೆಗಳನ್ನು ಈ ಯೋಜನೆ ಒಳಗೊಳ್ಳಲಿದೆ ಎಂದು ಆಜಾದ್ ಹೇಳಿದ್ದಾರೆ.

ಇದೇ ಸಂದರ್ಭದಲ್ಲೇ, ಸೆಪ್ಟೆಂಬರ್ 19ರಿಂದ ನಾಲ್ಕು ದಿನಗಳ ಕಾಲ ವಿಶ್ವ ಸಂಸ್ಥೆಯ ವಿಶೇಷ ಅಧಿವೇಶನ ನಡೆಯುತ್ತಿದೆ. ಬೃಹತ್ತಾಗಿ ಬೆಳೆಯುತ್ತಿರುವ ಈ ಆರೋಗ್ಯ ಸಮಸ್ಯೆಯನ್ನು ಚಿವುಟಿ ಹಾಕಲು ಅಗತ್ಯವಾದ ಕಾರ್ಯತಂತ್ರಗಳನ್ನು ಈ ಸಭೆಯಲ್ಲಿ ರೂಪಿಸಲಾಗುವುದು. ಅಂತರರಾಷ್ಟ್ರೀಯ ಮಟ್ಟದಲ್ಲಿ ಇನ್ನು ಮುಂದೆ ರೂಪಿಸಲಾಗುವ ಎಲ್ಲಾ ಅಭಿವೃದ್ಧಿ ಗುರಿಗಳಲ್ಲೂ, ಸಾಂಕ್ರಾಮಿಕವಲ್ಲದ ರೋಗಗಳ ನಿಯಂತ್ರಣಕ್ಕೆ ಆದ್ಯತೆ ನೀಡಬೇಕಾದ ಬಗ್ಗೆ ವಿಶ್ವ ಸಮುದಾಯ ಗಮನ ಹರಿಸಬೇಕಾದ ತುರ್ತು ಈಗ ಎದುರಾಗಿದೆ.

ಮಧುಮೇಹ ದೀರ್ಘಾವಧಿ ಆರ್ಥಿಕ ಹೊರೆಗೆ ಕಾರಣವಾಗುವುದಷ್ಟೇ ಅಲ್ಲದೆ ಹಲವು ಬಗೆಯ ಆರೋಗ್ಯ ತೊಡಕುಗಳಿಗೂ ಕಾರಣವಾಗುತ್ತದೆ. ಇದಕ್ಕಾಗಿ ಪ್ರಯೋಗಾಲಯ ಪರೀಕ್ಷೆಗಳು ಮಧುಮೇಹದಂತಹ ರೋಗದ ನಿಯಂತ್ರಣದಲ್ಲಿ ಬಹು ಮುಖ್ಯವಾದದ್ದು. ಈ ನಿಟ್ಟಿನಲ್ಲಿ ಅಗತ್ಯ ಉಪಕರಣಗಳು ಮಾತ್ರವಲ್ಲ ಪರಿಣತರ ಲಭ್ಯತೆಯೂ ಇರಬೇಕು. ಹೆಚ್ಚು ಆರ್ಥಿಕ ಹೊರೆ ಇಲ್ಲದೆ ಜನರಿಗೆ ಇವು ದೊರೆಯುವಂತಾಗಬೇಕು. ಇವೆಲ್ಲದರ ಜೊತೆ ರೋಗ ಬರದಂತೆ ಎಚ್ಚರ ವಹಿಸಲು ಆರೋಗ್ಯಕರ ಜೀವನಶೈಲಿ ಹಾಗೂ ಆರೋಗ್ಯಕರ ಆಹಾರ ಸೇವನೆಯತ್ತ ಜನರಲ್ಲಿ ಜಾಗೃತಿ ಮೂಡಿಸುವುದು ಬಹಳ ಮುಖ್ಯ.

■ ಸಿ.ಜಿ. ಮಂಜುಳಾ